# ಜಾಗತೀಕರಣ ಮತ್ತು ಕುಟುಂಬ ವ್ಯವಸ್ಥೆ

ಜಿ. ಎಸ್. ಜಯದೇವ

## ಸ್ವಾತಂತ್ರವನ್ನು ಬಲಿಕೊಟ್ಟು ಸರಕುಗಳಿಗೆ ಶರಣು

ಹೆಂಗಸರು ಮತ್ತು ಮಕ್ಕಳು ಒಂದು ಕುಟುಂಬದ ದುರ್ಬಲ ಸದಸ್ಯರು. ನಮ್ಮ ಪುರುಷಪ್ರಧಾನ ಸಮಾಜ ಬಹಳ ಹಿಂದಿನ ಕಾಲದಿಂದಲೂ ಮಹಿಳೆಯರನ್ನು ಮತ್ತು ಮಕ್ಕಳನ್ನು ಶೋಷಣೆಗೆ ಗುರಿ ಮಾಡಿದೆ. ೪೦೦ ಮಿಲಿಯನ್ ಮಕ್ಕಳಿರುವ (೦-೧೮ ವರ್ಷ) ನಮ್ಮ ದೇಶ ಪ್ರಪಂಚದಲ್ಲೆ ಅತಿ ಹೆಚ್ಚು ಮಕ್ಕಳಿರುವ ದೇಶ. ಬಾಲಕಾರ್ಮಿಕರ ಸಂಖ್ಯೆಯಲ್ಲೂ ನಮ್ಮ ದೇಶವನ್ನು ಸರಿಗಟ್ಟುವ ದೇಶ ಮತ್ತೊಂದಿಲ್ಲ. ಜಾಗತೀಕರಣ ಎಲ್ಲ ಸ್ತರಗಳಲ್ಲೂ ಬಲಾಢ್ಯರ ಪರವಾಗಿ ಕೆಲಸ ಮಾಡುವುದರಿಂದ ಸಮಾಜದ ಎಲ್ಲ ದುರ್ಬಲ ವರ್ಗಗಳೂ ಅವನತಿಯ ಅಂಚಿಗೆ ಸರಿಯುತ್ತಿರುವುದು ಈ ಹೊಸ ಸಹಸ್ರಮಾನದ ಘೋರ ದುರಂತ. ಗ್ರಾಮೀಣ ಪ್ರದೇಶದ ಬಡವರು, ವೃದ್ಧರು, ಹಿಂದುಳಿದ ವರ್ಗಗಳ ಜನ ಈ ದುರಂತದ ಬಲಿಪಶುಗಳಾಗುತ್ತಿರುವುದು ದಿನೇ ದಿನೇ ಹೆಚ್ಚುತ್ತಲೇ ಇದೆ. ಈ ಹಿನ್ನೆಲೆಯಲ್ಲಿ ಕುಟುಂಬ ವ್ಯವಸ್ಥೆಯ ಮೇಲೆ ಜಾಗತೀಕರಣದ ಪರಿಣಾಮವನ್ನು ಪರಿಶೀಲಿಸೋಣ.

ತಾತ್ವಿಕವಾಗಿ ಜಾಗತೀಕರಣದ ಎಲ್ಲ ಅಧಿಕೃತ ಧೋರಣೆಗಳು ಸ್ತ್ರೀಪರವಾದ ಮತ್ತು ಮಕ್ಕಳ ಪರವಾದ ಕಾಳಜಿಯನ್ನು ಪ್ರದರ್ಶಿಸುತ್ತದೆ. ಏಕೆಂದರೆ ಜನವಿರೋಧಿ ಧೋರಣೆ ವ್ಯಾಪಾರಿ ದೃಷ್ಟಿಯಿಂದ ಹಾನಿಕರ. ಆದರೆ ಆರ್ಥಿಕ ಯಶಸ್ಸನ್ನು ಮಾತ್ರ ಗುರಿಯಾಗಿಟ್ಟುಕೊಂಡಿರುವ ಬಹುರಾಷ್ಟ್ರೀಯ ಕಂಪನಿಗಳು ಸಾಮಾಜಿಕ ಅಸಮಾನತೆಯನ್ನು ಹೇಗೆ ಪೋಷಿಸುತ್ತದೆ ಎಂದು ಈ ಉದಾಹರಣೆಯಿಂದ ನೋಡಬಹುದು. ಮುಂಬಯಿ ನಗರದ ವಿವಿಧ ಕಛೇರಿಗಳಲ್ಲಿ ಕೆಲಸ ಮಾಡುವ ನೌಕರರಿಗೆ ಬಹುರಾಷ್ಟ್ರೀಯ ಕಂಪನಿ ಮ್ಯಾಕ್ ಡೊನಾಲ್ಡ್ ಮಧ್ಯಾಹ್ನದ ಊಟವನ್ನು ಒದಗಿಸುತ್ತದೆ. ಈ ಕಂಪನಿ ತಾನು ತಯಾರಿಸಿದ ಊಟದ ಡಬ್ಬಿಗಳನ್ನು ನೌಕರರಿಗೆ ತಲುಪಿಸಲು 'ಡಬ್ಬಾವಾಲ' ಗಳನ್ನು ನೇಮಿಸಿಕೊಂಡಿದೆ. ಈ ಡಬ್ಬಾವಾಲರಲ್ಲಿ ಒಬ್ಬರೂ ಹರಿಜನರಿಲ್ಲ! ಏಕೆಂದರೆ ಹರಿಜನ ಜಾತಿಗೆ ಸೇರಿದ ಡಬ್ಬಾವಾಲ ಮುಟ್ಟಿದ ಡಬ್ಬಿಯಿಂದ ತಿನ್ನಲು ಮೇಲ್ಜಾತಿಯ ನೌಕರನೊಬ್ಬ ನಿರಾಕರಿಸಿದರೆ? ಜಾತೀಯತೆಯ ಬಗ್ಗೆ ಯಾವ ನಂಬಿಕೆಯೂ ಇಲ್ಲದಿದ್ದರೂ ಈ ಬಹುರಾಷ್ಟ್ರೀಯ ಕಂಪನಿ ತನಗೆ ಸಂಬಂಧಪಡದ ಸವಾಲನ್ನು ಎದುರಿಸಲು ಸಿದ್ಧವಿಲ್ಲ. ಕಂಪನಿಯ ಉದ್ದೇಶ ಆರ್ಥಿಕ ಯಶಸ್ಸು. ಇಂತಹ ವ್ಯವಸ್ಥೆಯಲ್ಲಿ ಸಾಮಾಜಿಕ ಕಳಕಳಿಯನ್ನು ನಿರೀಕ್ಷಿಸುವುದು ಮೂರ್ಖತನ. ದೊಡ್ಡ ದೊಡ್ಡ ವೈಜ್ಞಾನಿಕ ಸಂಶೋಧನೆಗಳೂ ಕೂಡ ಬಹುರಾಷ್ಟ್ರೀಯ ಕಂಪನಿಗಳ ವಶದಲ್ಲಿರುತ್ತವೆ. ಈ ಸಂಶೋಧನೆಗಳ ಫಲ ನಮ್ಮ ಮನೆಯ ಹೊಸ್ತಿಲಿಗೇ ಬಂದರೂ ಅದಕ್ಕೆ ನಾವು ತೆರುವ ಬೆಲೆ ಕೇವಲ ಹಣದ ಬೆಲೆಯಲ್ಲ. ಪರಿಸರದ ಬೆಲೆ, 'ನನ್ನತನ' ಎಂಬುದನ್ನು ಕಳೆದುಕೊಳ್ಳುವ ಸಾಂಸ್ಕೃತಿಕ ಬೆಲೆ, ಶಾಂತಿ ನೆಮ್ಮದಿಗಳನ್ನು ಕಳೆದುಕೊಳ್ಳುವ ಬೆಲೆ – ಹೀಗೆ ನಾವು ನಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಈ ಸರಕುಗಳಿಗೆ ಶರಣಾಗುತ್ತೇವೆ. ವ್ಯವಸಾಯದ ಉತ್ಪಾದನೆ ಹಿಂದೆಂದೂ ಇಲ್ಲದಷ್ಟು ಹೆಚ್ಚಿದ್ದರೂ ೧೯೯೭ ರಿಂದ ಆತ್ಮಹತ್ಯೆ ಮಾಡಿಕೊಂಡಿರುವ ನಮ್ಮ ರೈತರ ಸಂಖ್ಯೆ ೨೫,೦೦೦! ಕಳೆದ ಹದಿನೈದು ವರ್ಷಗಳಿಂದಲೂ ಗ್ರಾಮೀಣ ಪ್ರದೇಶದ ಜನ ತಮಗೆ ಅಗತ್ಯವಾದಷ್ಟು ಆಹಾರವನ್ನು ಸೇವಿಸಲಾಗುತ್ತಿಲ್ಲ. ಇದು ದವಸ ಧಾನ್ಯಗಳ ಕೊರತೆಯಲ್ಲ. ನ್ಯಾಯ–ನೀತಿಯ ಮಾನವೀಯತೆಯ ಕೊರತೆ; ಹಣದ ಕೊರತೆಯೂ ಅಲ್ಲ; ಅಂತಃಕರಣದ ಕೊರತೆ. ಈ ಕೊರತೆಗಳನ್ನು ಸೃಷ್ಟಿಸುವಲ್ಲಿ ಜಾಗತೀಕರಣವನ್ನು ಬಳಸಿಕೊಳ್ಳುವ ಬಹುರಾಷ್ಟ್ರೀಯ ಕಂಪನಿಗಳ ಪಾತ್ರವೆ ಬಹಳ ದೊಡ್ಡದು.

### ಕುಟುಂಬ

ಜಗತ್ತನ್ನು ಸರಿಯಾದ ಹಾದಿಯಲ್ಲಿ ತರಲು, ನಾವು ದೇಶವನ್ನು ಒಳ್ಳೆಯ ದಾರಿಗೆ ತರಬೇಕು; ದೇಶವನ್ನು ಸರಿ ಮಾಡಲು, ಕುಟುಂಬವನ್ನು ಒಳ್ಳೆಯ ಮಾರ್ಗಕ್ಕೆ ತರಬೇಕು. ಕುಟುಂಬವನ್ನು ಉತ್ತಮ ಮಾರ್ಗದಲ್ಲಿ ನಡೆಸಲು ನಮ್ಮ ವ್ಯಕ್ತಿಗತ ಜೀವನವನ್ನು ಸರಿಪಡಿಸಿಕೊಳ್ಳಬೇಕು. ಅದಕ್ಕಾಗಿ ನಮ್ಮ ಹೃದಯವನ್ನು ಪರಿಶುದ್ಧವಾಗಿರಿಸಿಕೊಳ್ಳಬೇಕು. – *ಕನ್‌ಫ್ಯೂಶಿಯಸ್*

ಪ್ರಕೃತಿಯ ಅದ್ಭುತ ರಚನೆಯೇ ಕುಟುಂಬ.
– *ಜಾರ್ಜ್ ಸಂತಾಯನ*

ಒಂದು ದೇಶಕ್ಕೆ ಮತ್ತು ಮಾನವತೆಗೆ ಒಬ್ಬನು ಮಾಡಬಹುದಾದ ಅತ್ಯುತ್ತಮ ಸಮಾಜ ಸೇವೆಯೆಂದರೆ, ಕುಟುಂಬವನ್ನು ನೋಡಿಕೊಳ್ಳುವುದು. –*ಜಾರ್ಜ್ ಬರ್ನಾರ್ಡ್ ಷಾ*

ಕುಟುಂಬವೆಂಬುವುದು ನಾಗರಿಕತೆಯ ಕೇಂದ್ರಬಿಂದು.
– *ವಿಲ್ ಡ್ಯುರಾಂಟ್*

## ಅವಿಭಕ್ತ – ವಿಭಕ್ತ ಕುಟುಂಬಗಳು

ಕುಟುಂಬ ಪದ್ಧತಿ ನಾಗರಿಕತೆಯ ಯಾವುದೋ ಹಂತದಲ್ಲಿ ಅನಿವಾರ್ಯವಾಗಿ ಆಚರಣೆಗೆ ಬಂದಿದೆ ಎಂದು ಊಹಿಸಬಹುದು. ಹೀಗೆ ಕುಟುಂಬ ವ್ಯವಸ್ಥೆ ರೂಪುಗೊಳ್ಳಲು ಊಹಿಸಬಹುದಾದ ಪ್ರಬಲ ಕಾರಣ ಎಂದರೆ ಪಶುಸಂಪತ್ತಾಗಿರಬಹುದು, ಕೃಷಿ ಭೂಮಿಯ ಮೇಲಿನ ಒಡೆತನವಾಗಿರಬಹುದು ಅಥವಾ ನಿರಂತರ ಫಲ ನೀಡುವ ಮರಗಳ ಮೇಲಿನ ಒಡೆತನವಾಗಿರಬಹುದು. ಹೀಗೆ 'ನನ್ನದು' ಎಂಬ ಒಡೆತನದ ಭಾವನೆಯ ಅಂಕುರದೊಂದಿಗೆ ಒಬ್ಬ ವ್ಯಕ್ತಿಗೆ ಸೇರಿದ ಅವನ ಹೆಂಡತಿ–ಮಕ್ಕಳು, ತಂದೆ ತಾಯಿ ಎಲ್ಲರೂ ಒಟ್ಟಿ ಸೇರಿ ಬಾಳುವ

ಕುಟುಂಬ ಪದ್ಧತಿ ಆಚರಣೆಗೆ ಬಂತು. ಹೀಗೆ ಸಂಪತ್ತಿನ ರಕ್ಷಣೆಯ ಜೊತೆ ಸದಸ್ಯರ ಸಂಬಂಧವನ್ನು ಗಾಢವಾಗಿ ಬೆಸೆಯುತ್ತದೆ. ಇವರಲ್ಲಿ ಅನುಭವದ ಪಾತ್ರವೆ ಮುಖ್ಯ. ಆದ್ದರಿಂದ ಗುರು ಹಿರಿಯರಿಗೆ ಗೌರವ ಎಂಬುದು ಅನಿವಾರ್ಯವಾದ ಕುಟುಂಬ ಹಿತರಕ್ಷಣೆಯ ಮೌಲ್ಯವಾಗಿತ್ತು. ವ್ಯವಸಾಯಪ್ರಧಾನವಾದ ನಮ್ಮ ದೇಶದಲ್ಲಿ ಒಟ್ಟು ಕುಟುಂಬ ಅಥವಾ ಅವಿಭಕ್ತ ಕುಟುಂಬಗಳು ಉತ್ಪಾದನೆಗೆ ಹೆಚ್ಚು ಅನುಕೂಲಕರವಾಗಿ ಒಟ್ಟು ಕುಟುಂಬಗಳ ಆಚರಣೆಯಲ್ಲಿದ್ದವು.

ಜಾಗತೀಕರಣದಿಂದ ಕುಟುಂಬಗಳು ಒಡೆದುಹೋಗುತ್ತಿವೆ ಎಂಬ ಭಾವನೆ ಕೆಲವರಲ್ಲಿದೆ. ಆದರೆ ಭಾರತದಲ್ಲಿ ಇಂದಿಗೂ ಒಟ್ಟು ಕುಟುಂಬಗಳ ಸಂಖ್ಯೆಯೇ ಹೆಚ್ಚು. ೨೦೦೧ರ ಜನಗಣತಿ ಅಂಕಿಅಂಶಗಳ ಪ್ರಕಾರ ಭಾರತದ ಕುಟುಂಬಗಳ ಪೈಕಿ ಶೇ. ೫೬ ರಷ್ಟು ಅವಿಭಕ್ತ ಕುಟುಂಬಗಳು. ಶೇ. ೪೪ ಮಾತ್ರ ವಿಭಕ್ತ ಕುಟುಂಬಗಳು (Nuclear Family). ಹಿಂದೆ ಯೂರೋಪ್‌ನಲ್ಲಿ ಇದ್ದ ಕುಟುಂಬಗಳನ್ನು ಅವಿಭಕ್ತ ಕುಟುಂಬಗಳೆಂದು ಕರೆಯಲಾಗದಿದ್ದರೂ ಒಂದು ಕುಟುಂಬದ ವಿಸ್ತೃತ ರೂಪದಲ್ಲಿ (Extended Family) ನಿರ್ದಿಷ್ಟ ಗುಂಪಿನ ಜನ ಒಟ್ಟಿಗೆ ವಾಸಿಸುತ್ತಿದ್ದರು. ಒಂದೇ ಪೀಳಿಗೆಯ ತಂದೆ-ತಾಯಿ ಮತ್ತು ಅವರ ಮಕ್ಕಳು ಒಟ್ಟಾಗಿ ಬಾಳುವ ಕುಟುಂಬಗಳು (Nuclear Family) ಕೇವಲ ೨೦೦-೩೦೦ ವರ್ಷಗಳಿಂದ ಈಚೆಗೆ ಮಾತ್ರ ಕಂಡುಬರುತ್ತಿದೆ.

### ಕುಟುಂಬ ಬಾಂಧವ್ಯ

ಬೇಕಿಲ್ಲ ನಮಗೆ ಅಧಿಕಾರ ವೈಭೋಗ;
ವಿಶಾಲಕೋಣೆ ಅಥವಾ ಎತ್ತರದ ಗೊಮ್ಮಟಗಳು
ನಮ್ಮ ಮನೆಯ ಸಕಲಸಂಪದವದು ಆಗುವವು
–ಒಳ್ಳೆಯತನ, ಸತ್ಯ, ಮಾಧುರ್ಯಗಳು.

*–ಸಾರಾ ಜೆ. ಹೇಲ್*

ತಂದೆತಾಯಿಯರ ಮಾತುಗಳು ಭಗವಂತನ ಉಕ್ತಿಗಳು, ಏಕೆಂದರೆ ಮನೆಯ ಮಕ್ಕಳಿಗೆ ಅವರೇ ಆ ದೇವನ ಸೇವಕರು. *– ಶೇಕ್ಸ್‌ಪಿಯರ್*

ಸಂತುಷ್ಟ ಕುಟುಂಬಗಳು ಒಬ್ಬರನ್ನೊಬ್ಬರು ಹೋಲುವವು. ಪ್ರತಿ ಅಸಂತುಷ್ಟ ಕುಟುಂಬವೂ ತನ್ನದೇ ಆದ ಬಗೆಯಲ್ಲಿ ಸಂಕಷ್ಟದಲ್ಲಿರುವುದು. *–ಲಿಯೋ ಟಾಲ್‌ಸ್ಟಾಯ್*

### ಸಂಬಂಧಗಳ ಸೌಹಾರ್ದತೆಯ ಕೊರತೆ

ಜಾಗತೀಕರಣವು ಕುಟುಂಬ ರಚನೆಯ ಮೇಲೆ ಅಷ್ಟಾಗಿ ಪ್ರಭಾವ ಬೀರದಿದ್ದರೂ ಕುಟುಂಬದ ಸದಸ್ಯರ ನಡುವಿನ ಸಂಬಂಧಗಳ ಮೇಲೆ ಗಾಢವಾದ ಪ್ರಭಾವ ಬೀರುತ್ತಿದೆ. ಅದರಲ್ಲೂ ಮುಖ್ಯವಾಗಿ ಸಂಬಂಧಗಳ ಸೌಹಾರ್ದತೆಯನ್ನು ಕಾಪಾಡುವ ಮೌಲ್ಯಗಳಲ್ಲಿ ಗುರುತರ ಬದಲಾವಣೆಗಳಾಗಿವೆ. ಉದಾಹರಣೆಗೆ ಸಾಫ್ಟ್‌ವೇರ್ ಕಂಪನಿಗಳಲ್ಲಿ ಕೆಲಸ ಮಾಡುವ ೨೪ ರ ತರುಣ ತನ್ನ ತಂದೆ ನಿವೃತ್ತಿ ಕಾಲದಲ್ಲಿ ಪಡೆಯುತ್ತಿದ್ದ ವೇತನದ ಐದು ಅಥವಾ ಆರು ಪಟ್ಟು ಸಂಬಳ ಸಂಪಾದಿಸುತ್ತಾನೆ. ಅಪ್ಪ ತನ್ನ ಇಡೀ ಜೀವಮಾನದಲ್ಲಿ ಸಂಪಾದಿಸಲಾಗದ್ದನ್ನು ಮಗ ಕೆಲವೇ ವರ್ಷಗಳಲ್ಲಿ ಸಂಪಾದಿಸುತ್ತಾನೆ.

ಈ ಅಸಾಧಾರಣ ಆರ್ಥಿಕ ಸಾಮರ್ಥ್ಯವನ್ನು ತಂದುಕೊಡುವ ಜಾಗತೀಕರಣ ರೂಪಿಸುವ ಜೀವನ ದೃಷ್ಟಿಯಾದರೂ ಎಂತಹದು? 'ಹೆಚ್ಚು–ಅತಿಹೆಚ್ಚು', 'ದೊಡ್ಡದು–ಮತ್ತಷ್ಟು ದೊಡ್ಡದು' ಎಂಬ ಪ್ರವೃತ್ತಿಯನ್ನು ಇದು ಪೋಷಿಸುತ್ತದೆ. ಜೀವನ ಮೌಲ್ಯ, ಜೀವನ ಧರ್ಮ, ಮಾನವೀಯತೆಗಳು ಇವರ ಜೀವನದಲ್ಲಿ ಯಾವ ನಿರ್ಣಾಯಕ ಪಾತ್ರವನ್ನೂ ವಹಿಸುವುದಿಲ್ಲ. ಆರ್ಥಿಕವಾಗಿ ನಾನು ಬೆಳೆಯುವುದು ಎಂದರೆ ತಾನು ಕೆಲಸ ಮಾಡುವ ಕಂಪನಿಯನ್ನು ಮತ್ತಷ್ಟು ಮಹತ್ತಾಗಿ ಬೆಳೆಸುವುದು. ಈ ಬೆಳೆಯುವಿಕೆಯಲ್ಲಿ "ಬಹು ಜನರ ಹಿತ" ಎಂಬಂಥ ಕಾಳಜಿಗಳಿಗೆ ಸ್ಥಾನವಿಲ್ಲ. ಈ ಧೋರಣೆಯೊಂದೆ ವ್ಯಕ್ತಿಯ ಏಕಮಾತ್ರ ಗುರಿಯಾದಾಗ ಹುಟ್ಟುವ ಜೀವನ ದೃಷ್ಟಿ–ಜೀವನಧರ್ಮಗಳನ್ನು ನಾವು ಸುಲಭವಾಗಿ ಊಹಿಸಬಹುದು. ಯಾವ ಮನೋಧರ್ಮವನ್ನು ರೂಢಿಸಿಕೊಂಡು ಹಣ ಸಂಪಾದನೆ ಮಾಡುತ್ತಾರೊ ಅದೇ ಮನೋಧರ್ಮಕ್ಕೆ ಅನುಗುಣವಾಗಿ ಅದರ ಬಳಕೆಯೂ ಆಗುತ್ತದೆ. ಹೀಗೆ ಮಿತಿಮೀರಿದ 'ಸಂಪಾದನೆ–ಬಳಕೆ' ಯ ಪ್ರಕ್ರಿಯೆ ಜಾಗತೀಕರಣದ ಹಿನ್ನೆಲೆಯಲ್ಲಿ ನಮ್ಮ ಜೀವನ ಮೌಲ್ಯಗಳನ್ನು ರೂಪಿಸುತ್ತಿದೆ. ಮನುಷ್ಯ ಸಂಬಂಧಗಳು ಬಡವಾಗುತ್ತಿವೆ. ತಂದೆ ಮಕ್ಕಳು, ಗಂಡಹೆಂಡತಿ, ತಾಯಿ ಮಕ್ಕಳು– ಹೀಗೆ ಕೌಟುಂಬಿಕ ಸಂಬಂಧಗಳು ತಮ್ಮದೇ ಆದ ಹೊಸ ಸಮೀಕರಣಗಳನ್ನು ಕಂಡುಕೊಳ್ಳುತ್ತಿವೆ. ಹಿಂದೆ ಕಾಣದ ಹೊಸ ಸಂಬಂಧಗಳು ಕೂಡ ಈಗ ತಲೆಯೆತ್ತುತ್ತಿವೆ. ಉದಾಹರಣೆಗೆ, ಉತ್ತರ ಭಾರತದ ಕೆಲವು ಸಮುದಾಯಗಳಲ್ಲಿ ಅದರಲ್ಲೂ ಮುಖ್ಯವಾಗಿ ಪಂಜಾಬಿಗಳಲ್ಲಿ, ಮಗಳನ್ನು ಮದುವೆ ಮಾಡಿಕೊಟ್ಟ ಮೇಲೆ ಆಕೆಯ ತಂದೆತಾಯಿಯರು ಮಗಳ ಮನೆಗೆ ಯಾವ ಕಾರಣಕ್ಕೂ ಹೋಗುವಂತಿಲ್ಲ. ಆದರೆ ಈ ಹಳೆಯ ಸಂಪ್ರದಾಯ ಮುರಿದು ಈಗ ಹುಡುಗಿಯ ತಂದೆತಾಯಿಯರು ತಮ್ಮ ಅಳಿಯಂದಿರ ಮನೆಗೆ ಹೋಗುತ್ತಾರೆ. ಏಕೆಂದರೆ, ಅಳಿಯ–ಮಗಳು ಇಬ್ಬರೂ ಕೆಲಸಕ್ಕೆ ಹೋಗುವುದರಿಂದ ಮೊಮ್ಮಕ್ಕಳ ಲಾಲನೆ ಪಾಲನೆಗೆ ಈ ಹೊಸ ಸಂಬಂಧ ಅನಿವಾರ್ಯ. ಇತ್ತೀಚಿನ ದಿನಗಳಲ್ಲಿ ನಿವೃತ್ತರಾದವರಿಗೆ ನಿಜವಾಗಿಯೂ ನಿವೃತ್ತಿ ಎಂಬುದೇ ಇಲ್ಲ. ಅನಿವಾರ್ಯವಾಗಿ ಇವರು ತಮ್ಮ ಮೊಮ್ಮಕ್ಕಳ ಲಾಲನೆ ಪಾಲನೆಯಲ್ಲಿ ತೊಡಗಬೇಕು. ಕೆಲವು ವೃದ್ಧರಂತೂ ತಮ್ಮ ಎರಡು ಅಥವಾ ಮೂರು ಮಕ್ಕಳ ಮನೆಗಳಿಗೆ ಸರತಿಯ ಮೇಲೆ ಹೋಗಿ ಮೊಮ್ಮಕ್ಕಳನ್ನು ನೋಡಿಕೊಳ್ಳಬೇಕಾಗಿದೆ. ಇಳಿ ವಯಸ್ಸಿನಲ್ಲಿ ಎರಡನೆ ಸುತ್ತಿನ ಮಕ್ಕಳ ಪಾಲನೆ ವೃದ್ಧರಿಗೆ ಬೇಸರ ತರಬಹುದು ಅಥವಾ ಅವರ ಮೇಲೆ ಅನಾವಶ್ಯಕ ಒತ್ತಡವನ್ನು ಹೇರಿದಂತಾಗಬಹುದು.

## ಸ್ಥಿತಿವಂತ – ಬಡ ಕುಟುಂಬಗಳ ವೈಪರೀತ್ಯಗಳು

ಸ್ಥಿತಿವಂತ ಕುಟುಂಬಗಳಲ್ಲಿ ಪರಿಸ್ಥಿತಿ ಇದಕ್ಕಿಂತ ಸ್ವಲ್ಪ ಭಿನ್ನವಾಗಿದೆ. ಅವುಗಳು ಅವಶ್ಯಕತೆಗೆ ತಕ್ಕಂತೆ ಹೊಸ ಹೊಂದಾಣಿಕೆ ಮಾಡಿಕೊಂಡು, ಸಂಬಂಧಗಳ ಹೊಸ ಸಮೀಕರಣದೊಂದಿಗೆ ಹೇಗೋ ಒಟ್ಟಾಗಿ ಬಾಳುತ್ತಿವೆ. ಆದರೆ ಕ್ಷಿಪ್ರವಾಗಿ ಬದಲಾವಣೆ ಕಾಣುತ್ತಿರುವ ಆರ್ಥಿಕ ಸ್ಥಿತಿಗತಿಯಿಂದಾಗಿ ಬಡ ಕುಟುಂಬಗಳು ಹದಗೆಟ್ಟು ಒಡೆದು ಚೂರಾಗುತ್ತಿರುವುದನ್ನು ಕಾಣಬಹುದು. ಈ ಕುಟುಂಬಗಳಲ್ಲಿ ದುಡಿಯುವ ಶಕ್ತಿ ಇರುವ ಕುಟುಂಬದ ಸದಸ್ಯರು ರೆಕ್ಕೆ ಬಲಿತ ಹಕ್ಕಿಗಳಂತೆ ಹಾರಿಹೋಗಿ ತಮ್ಮ ಹಿತವನ್ನು ತಾವು ನೋಡಿಕೊಳ್ಳುವ ಅನಿವಾರ್ಯತೆ ಉಂಟಾಗಿದೆ. ಇದರಿಂದಾಗಿ ಬಡ ಕುಟುಂಬಗಳ ದುರ್ಬಲ ಸದಸ್ಯರು ಮತ್ತಷ್ಟು ನಿಕೃಷ್ಟ ಸ್ಥಿತಿಗೆ ಇಳಿದಿದ್ದಾರೆ. ಹೆಣ್ಣು ಮಕ್ಕಳ ಮಾರಾಟ, ಕಳ್ಳ ಸಾಗಾಣಿಕೆ ಮುಂತಾದ ದುಷ್ಕೃತ್ಯಗಳು, ವೇಶ್ಯಾವಾಟಿಕೆ, ಹೆಣ್ಣು ಮಕ್ಕಳ ಲೈಂಗಿಕ ಶೋಷಣೆಗಳು ಹೆಚ್ಚಾಗುತ್ತಿವೆ. ಹೀಗೆ ಅಧೋಗತಿಗೆ ಇಳಿದಿರುವ ಹೆಣ್ಣುಮಕ್ಕಳು ಸಾಮಾನ್ಯವಾಗಿ ಛಿದ್ರವಾದ ಬಡ ಕುಟುಂಬಗಳಿಂದ ಬೇರೆ ದಾರಿಗಾಣದೆ ಹೊರಬಂದವರು.

ಜಾಗತೀಕರಣದ ಹಿನ್ನೆಲೆಯಲ್ಲೂ ನಾವು ನ್ಯಾಯನಿಷ್ಠವಾದ, ಸಮಾನ ಅವಕಾಶಗಳುಳ್ಳ ಸ್ಥಿರ ಸಮಾಜದ ಕನಸನ್ನು ಜೀವಂತವಾಗಿಟ್ಟುಕೊಳ್ಳಬೇಕಾಗಿದೆ. ಎಲ್ಲಿಯವರೆಗೆ ಬಹುಸಂಖ್ಯಾತರ ದೌರ್ಬಲ್ಯಗಳು ಬಂಡವಾಳಶಾಹಿಗಳಿಗೆ ಬಂಡವಾಳವಾಗುತ್ತಲೇ ಇರುತ್ತದೋ ಅಲ್ಲಿಯವರೆಗೆ ದುರ್ಬಲರ ನೆರವಿಗೆ ನಿಲ್ಲುವ ಸಮಾಜ ಅಸ್ತಿತ್ವಕ್ಕೆ ಬರಲಾರದು. ಬಹುಸಂಖ್ಯಾತ ಶ್ರೀಸಾಮಾನ್ಯರ ದೌರ್ಬಲ್ಯಗಳು ಬಂಡವಾಳ ಶಾಹಿಗಳಿಗೆ ಅಮೂಲ್ಯವಾದ ಬಂಡವಾಳವಾಗುತ್ತಲೇ ಇದೆ. ಇದರ ಕಹಿಯನ್ನುಂಡು ಅದನ್ನೇ ಸುಖವೆಂಬ ಭ್ರಮೆಯಲ್ಲಿರುವ ಶ್ರೀಸಾಮಾನ್ಯ ಎಚ್ಚರಗೊಳ್ಳದೆ ಈ ಸಮಸ್ಯೆಗಳಿಗೆ ಪರಿಹಾರ ಅಸಾಧ್ಯ. ■

---

**ಪುಸ್ತಕ ಪರಿಚಯ** **ಮೌಲ್ಯಶಿಕ್ಷಣ ಪುಸ್ತಕಗಳು ( 6 ನೆಯ ತರಗತಿಯಿಂದ 9 ನೆಯ ತರಗತಿಯ ಮಕ್ಕಳಿಗಾಗಿ ಮತ್ತು ಶಿಕ್ಷಕರಿಗಾಗಿ – ಇಂಗ್ಲೀಷಿನಲ್ಲಿ ) ಪ್ರಕಾಶಕರು:** ರಾಮಕೃಷ್ಣ ಮಿಷನ್, ಬೇಲೂರು ಮಠ, ಹೌರಾ, ಕೊಲ್ಕತಾ 711 202 (ಪುಸ್ತಕಗಳ ಪಟ್ಟಿ, ಬೆಲೆಗಾಗಿ ಪುಟ 45 ನೋಡಿ)

**ಯಾ**ವುದು ಬದುಕನ್ನು ಮಂಗಳಮಯವಾಗಿ ಮಾಡುವುದೋ ಅದೇ ಮೌಲ್ಯ. ಪದವಿಗಳು, ಹಣ, ಅಧಿಕಾರ, ಸ್ಥಾನಮಾನ, ಇತ್ಯಾದಿಗಳಿಂದ ಮಾತ್ರ ಮನುಷ್ಯನ ಉನ್ನತಿ ಸಾಧ್ಯವಿಲ್ಲ. ಇವುಗಳ ಬೆನ್ನೆಲುಬು ಮೌಲ್ಯ. ಇದಕ್ಕಾಗಿಯೇ **'ನೀನು ಪರಿಪೂರ್ಣನಾಗು ಮತ್ತು ಇತರರನ್ನು ಅದರಂತೆ ಮಾಡು: ಪರಿಪೂರ್ಣತೆಯ ಪ್ರಕಟಣೆಗಾಗಿ ಶಿಕ್ಷಣ'** ಎಂಬ ಯೋಜನೆಯ ಅಡಿಯಲ್ಲಿ ಹೊರಬಂದ ಪುಸ್ತಕಮಾಲೆಯೇ ಈ ಮೇಲಿನ ಪುಸ್ತಕಗಳು. ಶಕ್ತಿಯುತ ರಾಷ್ಟ್ರನಿರ್ಮಾಣಕ್ಕಾಗಿ, ಶೀಲಸಂವರ್ಧನೆಗಾಗಿ, ಚಾರಿತ್ರ್ಯ ನಿರ್ಮಾಣಕ್ಕಾಗಿ, ಸಂಸ್ಕೃತಿ ರಕ್ಷಣೆ, ಪಾಲನೆ ಹಾಗೂ ಪೋಷಣೆಗಾಗಿ, ವರ್ಣರಂಜಿತ ಚಿತ್ರಗಳಿಂದ ಕೂಡಿದ ಪುಸ್ತಕಗಳೇ ಈಗ ಪ್ರಕಟವಾಗಿರುವ ಮೌಲ್ಯಶಿಕ್ಷಣ ಪುಸ್ತಕಮಾಲೆ.

ಆರನೆಯ ತರಗತಿಯಿಂದ ಒಂಭತ್ತನೆಯ ತರಗತಿಯವರೆಗೆ ಪುಸ್ತಕಗಳನ್ನು ಹೊರತರಲಾಗಿದೆ. ಏಳರಿಂದ ಒಂಭತ್ತನೆಯ ತರಗತಿಯವರೆಗೆ ಸ್ವಾಭಿವೃದ್ಧಿ ದಿನಚರಿ ಪುಸ್ತಕಗಳೂ ಪ್ರಕಟವಾಗಿವೆ. ಉಪಾಧ್ಯಾಯರು ಹಾಗೂ ಪೋಷಕರಿಗಾಗಿ ಒಂದು ಪುಸ್ತಕ ಪ್ರಕಟವಾಗಿದೆ. ಸಂಭಾಷಣೆ ಹಾಗೂ ಕಥಾರೂಪದಲ್ಲಿ, ಮೌಲ್ಯಗಳಿಸುವ ಕ್ರಮಗಳನ್ನು **ಅರುಣೋದಯ**ದಲ್ಲಿ ಕೊಡಲಾಗಿದೆ. ಇಲ್ಲಿರುವ ನಗೆಹನಿಗಳು, ತುಣುಕು–ಮಿಣುಕುಗಳು, ಒಗಟುಗಳು, ಸಮಸ್ಯೆಗಳು ಮೌಲ್ಯರೂಪಣೆಯ ಆಕರ್ಷಕ ಅಂಶಗಳಾಗಿವೆ. ತಂದೆತಾಯಿಯರು, ಬಂಧು–ಬಾಂಧವರು, ಗುರು–ಹಿರಿಯರು ಹಾಗೂ ಸ್ನೇಹಿತರೊಡನೆ ಅತ್ಯುತ್ತಮವಾದ ಬಾಂಧವ್ಯ ಹಾಗೂ ಹೃದಯಸ್ಪರ್ಶಿ ಸಂವಹನೆಗೆ ಪೂರಕವಾದ ಮಾರ್ಗದರ್ಶಿ ಸೂತ್ರಗಳು **ಮಾರ್ಗದರ್ಶಿ** ಪುಸ್ತಕದಲ್ಲಿದೆ. ವಿದ್ಯಾರ್ಥಿಯು ಸ್ವತಃ ಕಥೆ ಬರೆಯಲು ಇದು ಪ್ರಚೋದನೆಯನ್ನು ನೀಡುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಅನುಸರಿಸಬೇಕಾದ ರೀತಿ–ನೀತಿಗಳನ್ನು **ನಾನು ಹೇಗಿರಬೇಕು?** ಎಂಬ ಪುಸ್ತಕದಲ್ಲಿ ಕೊಡಲಾಗಿದೆ. ಮನೋರಂಜಕವಾಗಿರುವ, ಕಾಲನೊಡನೆ ಪಯಣಿಸುವ ಒಬ್ಬ ಹುಡುಗನ ಸಾಹಸಗಳು **ಸುಬೋಧನ ಸಾಹಸಗಳು** ಎಂಬ ಪುಸ್ತಕದಲ್ಲಿದೆ. ಪಠ್ಯಪುಸ್ತಕಗಳ ಜೊತೆಯಲ್ಲಿಯೇ ಪ್ರಕಟಗೊಂಡಿರುವ **ಸ್ವಾಭಿವೃದ್ಧಿ–ದಿನಚರಿ** ಪುಸ್ತಕಗಳು ಚೇತೋಹಾರಿ ಪುಸ್ತಕಗಳಾಗಿವೆ. ಘಟನಾವಳಿಗಳು, ಕಥೆಯ ತುಣುಕುಗಳು, ಆರೋಗ್ಯಕರ ಹಾಸ್ಯ, ವೈಜ್ಞಾನಿಕ ಸತ್ಯಗಳು, ಸಾಧು–ಸಂತರ ಹೇಳಿಕೆಗಳು, ಸಂತರ ಜೀವನಗಳು, ಪುಣ್ಯಕ್ಷೇತ್ರಗಳ ಮಾಹಿತಿಗಳು, ದಾರ್ಶನಿಕ ತತ್ತ್ವಗಳು, ಪ್ರಾಯೋಗಿಕ ಮಾರ್ಗೋಪಾಯಗಳು, ಯೋಗಾಸನಗಳು, ಪ್ರಾರ್ಥನೆಗಳು ಮುಂತಾದ ಪ್ರಮುಖ ನೈತಿಕ ಹಾಗೂ ಆಧ್ಯಾತ್ಮಿಕ ಉನ್ನತಿಗೆ ಬೇಕಾದ ಉಪಾಯಗಳು ಈ ದಿನಚರಿ ಪುಸ್ತಕಗಳಲ್ಲಿವೆ.

ಶೀಲ ಹಾಗೂ ಚಾರಿತ್ರ್ಯ ನಿರ್ಮಾಣದಲ್ಲಿ ಪೋಷಕರ ಹಾಗೂ ಉಪಾಧ್ಯಾಯರ ಪಾತ್ರ ನಿರ್ಣಾಯಕ. ಆದುದರಿಂದ ಇವರುಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು ಹೊರತಂದಿರುವ ಪುಸ್ತಕವೇ **ಮೌಲ್ಯ ಶಿಕ್ಷಣದಲ್ಲಿ ಪೋಷಕರು ಹಾಗೂ ಉಪಾಧ್ಯಾಯರು.** ಇದರಲ್ಲಿ ಪ್ರಾತ್ಯಕ್ಷಿಕವಾಗಿ ಐದು ಉದಾಹರಣೆಗಳನ್ನು ನೀಡಲಾಗಿದೆ. ಇದರಿಂದ ನಮ್ಮ ಸುತ್ತಮುತ್ತ ನಡೆದಿರುವ ಹಾಗೂ ನಡೆಯುತ್ತಿರುವ ಘಟನೆಗಳನ್ನು ನಾವು ಸೂಕ್ತ ರೀತಿಯಲ್ಲಿ ವಿಚಾರ ಮಾಡಲು ಸಾಧ್ಯವಾಗುತ್ತದೆ. ಇದರಿಂದಾಗಿ ನಾವು ಎಲ್ಲಿ ಎಡವಿದ್ದೇವೆ? ಹೇಗೆ ಎಡವಿದ್ದೇವೆ? ಈಗೇನು ಮಾಡಬೇಕು? ಮುಂದೆ ಹೇಗಿರಬೇಕು? ಇತ್ಯಾದಿ ಪ್ರಶ್ನೆಗಳಿಗೆ ಸೂಕ್ತ ಉತ್ತರ ಹಾಗೂ ಮಾರ್ಗದರ್ಶನ ಇಲ್ಲಿ ಕಾಣಸಿಗುತ್ತದೆ. ಇದೊಂದು ಕ್ರಿಯಾಯೋಜನಾ ಪುಸ್ತಕ. **ಒಟ್ಟಿನಲ್ಲಿ, ಮೇಲಿನ ಎಲ್ಲ ಪುಸ್ತಕಗಳು ಮಕ್ಕಳಿರುವ ಪ್ರತಿಯೊಬ್ಬರ ಮನೆಯಲ್ಲಿಯೂ, ಭಗವದ್ಗೀತೆಯಂತೆಯೇ ಇರಬಹುದಾದ ಪುಸ್ತಕಗಳಾಗಿವೆ** ಎಂಬುದರಲ್ಲಿ ಸಂಶಯವಿಲ್ಲ.

– **ಡಾ. ಸಿ. ಗುರುಮೂರ್ತಿ, ಪ್ರಾಧ್ಯಾಪಕರು,**
**ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ, ಮೈಸೂರು**